ಮೈಸೂರು ವಿಶ್ವವಿದ್ಯಾನಿಲಯ

ಡಿಓಆರ್9.5/ಪಿಹೆಚ್.ಡಿ/ಸಿಡಬ್ಲ್ಯು/2021-22

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯ ಸೌಧ,
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005.
ದಿನಾಂಕ 13/12/2021

ಗೆ,
ಅಧ್ಯಕ್ಷರು,
---------------- ಅಧ್ಯಯನ ವಿಭಾಗ,
ಮಾನಸಗಂಗೋತ್ರಿ,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು.

ಮಾನ್ಯರೇ,

**ವಿಷಯ: ದಿನಾಂಕ: 18/12/2021ರಂದು ನಡೆಯುವ ಪಿಹೆಚ್.ಡಿ ಕೋರ್ಸ್‌ವರ್ಕ್ ಪರೀಕ್ಷೆಯ ಬಗೆಗೆ,**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:18/12/2021 ರಂದು ಬೆಳಿಗ್ಗೆ 11.00 ಘಂಟೆಯಿಂದ ಮಧ್ಯಾಹ್ನ 2.00 ಘಂಟೆಯವರೆಗೆ ನಡೆಯಲಿರುವ ಪಿಹೆಚ್.ಡಿ ಕೋರ್ಸ್‌ವರ್ಕ್ ಪರೀಕ್ಷೆಯ ಸಲುವಾಗಿ ಈ ಕೆಳಗಿನ ಸೂಚನೆಗಳನ್ನು ತಮ್ಮ ಗಮನಕ್ಕೆ ತರಲಾಗಿದೆ.

ಅ) ಪರೀಕ್ಷೆಯ ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ನಮ್ಮ ಸಿಬ್ಬಂದಿಯವರಿಂದ ಪರೀಕ್ಷೆಯ ದಿನದಂದು ಬೆಳಿಗ್ಗೆ 9 ರಿಂದ 10.30ರ ಒಳಗೆ ತಮ್ಮ ವಿಭಾಗಕ್ಕೆ ತಲುಪಿಸಲಾಗುವುದು. ಈ ವೇಳೆಯಲ್ಲಿ ನಿಮ್ಮ ವಿಭಾಗದಲ್ಲಿ ಸಂಬಂಧಿಸಿದ ಸಿಬ್ಬಂದಿಯವರು ಇರಬೇಕೆಂದು ಸೂಚಿಸಲಾಗಿದೆ.

ಆ) ಪರೀಕ್ಷೆ ಮುಗಿದ ನಂತರ 2.00 ರಿಂದ 3.30ರ ಒಳಗೆ ನಮ್ಮ ಕಛೇರಿಯ ಸಿಬ್ಬಂದಿಯವರೆ ಬಂದು ಉತ್ತರ ಪತ್ರಿಕೆಗಳನ್ನು ಸ್ವೀಕರಿಸುವರು. ಈ ವೇಳೆಯಲ್ಲಿ ಉತ್ತರ ಪತ್ರಿಕೆಗಳನ್ನು ವ್ಯವಸ್ಥಿತವಾಗಿ ಪ್ಯಾಕಿಂಗ್ ಮಾಡಿರಬೇಕು.

ಇ) ಪರೀಕ್ಷೆ ಕಾರ್ಯ ನಿರ್ವಹಿಸಿದ ತಮ್ಮ ವಿಭಾಗದ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಸಂಭಾವನೆ ನೀಡುವ ಸಲುವಾಗಿ ಈ ಪತ್ರದ ಜೊತೆಯಲ್ಲಿ ಸಂಭಾವನೆಯ ಆದೇಶದ ಪ್ರತಿಯನ್ನು ಲಗತ್ತಿಸಲಾಗಿದೆ.

ಈ) ಪರೀಕ್ಷಾ ವೇಳೆ ಎಲ್ಲಾ ವಿಭಾಗಗಳಿಗೂ ನಮ್ಮ ಕಛೇರಿಯಿಂದ ನೇಮಕಗೊಂಡ ಪರೀಕ್ಷಾ ವೀಕ್ಷಕರು & ಪರೀಕ್ಷಾ ಮುಖ್ಯ ಅಧೀಕ್ಷಕರುಗಳು ಭೇಟಿ ನೀಡುವರೆಂದು ತಿಳಿಸಲಾಗಿದೆ.

**ಕೋವಿಡ್-19 ನಿಯಮಾವಳಿಗಳನ್ನು ಪಾಲಿಸುವ ಮೂಲಕ ಪರೀಕ್ಷೆಯನ್ನು ವ್ಯವಸ್ಥಿತವಾಗಿ ಹಾಗೂ ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಈ ಮೂಲಕ ತಿಳಿಸಲಾಗಿದೆ.**

**ವಂದನೆಗಳೊಂದಿಗೆ,**

14/12/21

ಕುಲಸಚಿವ(ಪರೀಕ್ಷಾಂಗ)